Doc-21
1-2-2

Reg No B G 155 — 5-2-1969

52 nd Year of Publication

SATYAVADI Daily, MYSORE-4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದ್ರಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೆಲವು ಪದಾರ್ಥಗಳ ಬೆಲೆಯ ತೆರಿಗೆ ಹೆಚ್ಚುವ ಸಂಭವ

ಮುಖ್ಯಮಂತ್ರಿಗಳ ನುಡಿ

ಬಳ್ಳಾರಿ— ತುಂಗಭದ್ರಾ ಆಯಕಟ್ಟಿನ ಕೆಳಗೆ 2 ಲಕ್ಷ ಎಕ್ರೆ ವ್ಯವಸಾಯ ನಡೆಸಲವಕಾಶವಿರುವಾಗ, ಕೇವಲ 25000 ಎಕ್ರೆಗಳಲ್ಲಿ ವ್ಯವಸಾಯ ನಡೆಯುತ್ತಿರುವದಕ್ಕೆ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ವಿಷಾದ ವ್ಯಕ್ತಪಡಿಸಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ನೂರುದ್ದೀನ್ ಶೆನ್ವಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಲ್.ಸಿ. ಮ್ಹೋದ್ರಿಯವರು, ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು), ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೇಕಾಗಿ ವಿನಂತಿಸಿ, ಈಡೇರುವಂತೆ ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ರಾಮರಾಜಪುರಂ ಮೈಸೂರು 4.

ನ್ಯಾಷನಲ್ ಮ್ಯೂಜಿಯಂನಲ್ಲಿನ ಕಳವು

ನವದೆಹಲಿ — ನ್ಯಾಷನಲ್ ಮ್ಯೂಜಿಯಂನಲ್ಲಾಗಿದ್ದ ಅಪೂರ್ವ ಪುರಾತನ ಆಭರಣಗಳ ಮತ್ತು ಮೊಗಲಾಯಿ ಮತ್ತಿತರ ಕಾಲದ ಚಿನ್ನದ ನಾಣ್ಯಗಳ ಕಳುವಿನ ಬಗ್ಗೆ ಯಶಸ್ವೀ ತನಿಖೆ ನಡೆಸಿದ 10 ಪೌರರು ಮತ್ತು 29 ಪೋಲೀಸರಿಗೆ ರೂ. 25 ಸಾವಿರ ಬಹುಮಾನ ಕೊಡಲಾಗುವುದು.

●

ಬಸ್ ಅನಾಹುತ

ಮಡಕೇರಿ — ಭಾಗಮಂಡಲಕ್ಕೆ ಹೋಗುತ್ತಿದ್ದ ಬಸ್ಸು ಮಡಕೇರಿ–ಮಂಗಳೂರು ರಸ್ತೆಯಲ್ಲಿ 100 ಅಡಿ ಕೆಳಗಿನ ಕಣಿವೆಗೆ ಬಿದ್ದಿತು ; ಹಾಗಾಗುವಾಗ ಅದು ತಗಲಿದ ಮೂರು ಮರಗಳು ಬೇರು ಸಹಿತ ಕಿತ್ತು ಬಂದವು — ಅದೃಷ್ಟವಶಾತ್ ಯಾರೂ ಸಾಯಲಿಲ್ಲ — 55 ಮಂದಿ ಸ್ವಲ್ಪ ಗಾಯಗೊಂಡರು.

●

ಲಾಕ್ ಔಟ್

ಮೈಸೂರು — ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಾಕ್ ಔಟನ್ನು ಆಡಳಿತ ವರ್ಗದವರು ನಿರ್ಧರಿಸಿದರು.

★

ಡಬ್ಬಲ್ ಮಾಡುವವರು ಸಿಕ್ಕಿಬಿದ್ದರು

ಮಂಡ್ಯ — ಹಣವನ್ನು ಎರಡರಷ್ಟು ಮಾಡಿಕೊಡುವುದಾಗಿ ಹೇಳಿ ಗ್ಲೂಕೋಸ್ ಬಿಸ್ಕತ್ತು ಪ್ಯಾಕೆಟ್ಟುಗಳನ್ನು ಕಾಗದದಲ್ಲಿ ಸುತ್ತಿ ಹಣದ ಬದಲು ಕೊಟ್ಟು ಜನರನ್ನು ಮೋಸಮಾಡುತ್ತಿದ್ದ ತಂಡದಲ್ಲಿನ ಹೆಡ್ ಕಾನಸ್ಟಬಲ್ ರತ್ನಂ ಮತ್ತಿತರನ್ನು ಇನ್ಸ್‌ಪೆಕ್ಟರ್ ಸಿದ್ದೀಕರು ಬಂಧಿಸಿದರು

★

ಭಾರತಕ್ಕೆ ವಿಜಯ

ಮನಿಲಾ — ಎರಡನೇ ಏಷ್ಯಾ ಬಾಸ್ಕೆಟ್‌ಬಾಲ್ ಸಂಘದಲ್ಲಿ ಹಾಂಕಾಂಗನ್ನು ಭಾರತವು ಸೋಲಿಸಿತು.

ಆಣ್ಣಾ ದೊರೆ ಣ ಲ್ಲ

ಮದರಾಸು — ನಿನ್ನೆ ಮಧ್ಯಾಹ್ನಕ್ಕೆ ಸ್ವಲ್ಪ ಮುಂಚೆ ಮೌರಿನಾದಲ್ಲಿ ಕಂಬ್ಯಾಸ್ ಸ್ಟ್ಯಾಚು ಹತ್ತಿರ, ಪೂರ್ಣ ಪೋಲೀಸು ಮತ್ತು ಮಿಲಿಟರಿ ಗೌರವದೊಡನೆ, ಸಮಾಧಿ ಮಾಡಲ್ಪಟ್ಟ ಮುಖ್ಯ ಮಂತ್ರಿ ಅಣ್ಣಾ ದೊರೈರ ಅಂತ್ಯಯಾತ್ರೆಯನ್ನು ಮಿಲಿಯಗಟ್ಟಲೆ ಜನರು ನೋಡಿದರು — 6 ಮೈಲಿ ಉದ್ದಕ್ಕೂ ರಸ್ತೆಯ ಎರಡೂ ಕಡೆಯಲ್ಲೂ 30 ಲಕ್ಷ ಜನ ನಿಂತಿದ್ದರು : ಉದ್ದಕ್ಕೂ ಹೂವು ಹಾಕಲಾಗುತ್ತಿತ್ತು — ಅಣ್ಣಾ ಅಣ್ಣಾ ಎಂದು ಶೋಕಿಸುತ್ತಿದ್ದರು — ದೇಹವನ್ನು ತೇಗದಮರದ ಪೆಟ್ಟಿಗೆಯಲ್ಲಿಟ್ಟು ಸಮಾಧಿ ಮಾಡಲಾಯಿತು — ಮೇಲೊಂದು ಸಮಾಧಿ ನಿರ್ಮಿಸಲು ಯೋಜಿಸಲಾಗಿದೆ.

ಎಲ್ಲ ಐಕಟ್ಟಡದ ಮುಂದಿನ ನೇರವಾದ ರಸ್ತೆಗೆ ಪಕ್ಷದ ಕಾರ್ಯಕರ್ತರು ತಮ್ಮ ನಾಯಕನು ಹೂವಿನ ರಸ್ತೆಯಲ್ಲಿ ಹೋಗಲೆಂದು ಲಾರಿಯಲ್ಲಿ ಹೂವು ತಂದು ಹಾಸಿದರು.

ಅಣ್ಣಾ ದೊರೈ ಅಂತ್ಯ ಸಂಸ್ಕಾರಕ್ಕಾಗಿ ಮದ್ರಾಸಿಗೆ ಬರುತ್ತಿದ್ದ ಸಹಸ್ರಗಟ್ಟಿ ಬರುತ್ತಿದ್ದ ಜನರಲ್ಲಿ, ಮಧುರಾಂತಕ-ಮದರಾಸು ಜನತಾ ಎಕ್ಸ್‌ಪ್ರೆಸ್ ರೈಲು ಗಾಡಿ ಚಾವಣಿ ಮೇಲಿದ್ದ ಪ್ರಯಾಣಿಕರಲ್ಲಿ 25 ಮಂದಿ ಸತ್ತು, 45 ಮಂದಿ ಗಾಯಗೊಂಡರು.

ಮೂರು ದಿನಗಳಿಂದ ನಗರ ಗುಡಿಸಲ್ಪಡದೆ ರಸ್ತೆಗಲ್ಲಿ ರಾಶಿರಾಶಿ ಕಚಡ ಬಿದ್ದಿತ್ತು.

ರಾಮನಾಥಪುರದಿಂದ 7000 ಲಾರಿಗಳಲ್ಲಿ ಜನಜಂಗುಳಿಯೆಂದೂ, ಒಂದೊಂದು ಲಾರಿಗಳಲ್ಲಿ 200 ಕ್ಕೂ ಹೆಚ್ಚು ಪ್ರಯಾಣಿಯನ್ನು ತುಂಬಿ ಲಾರಿ ಮಾಲಿಕರು ಹೆಚ್ಚು ಸಂಪಾದಿಸಿಕೊಂಡರು.

ಅಣ್ಣಾರವರ ಎದೆಮಟ್ಟದ ಭಾವಚಿತ್ರವಿದ್ದ ಹಿತ್ತಾಳೆ ಪದಕಗಳು ಒಂದಕ್ಕೆ 50

ತೆರಿಗೆ ಏರಿಕೆ !

ನವದೆಹಲಿ — ಸಿಗರೇಟು, ಸೊಬಗಿನ ಪದಾರ್ಥಗಳು, ದ್ವಿಚಕ್ರವಾಹನ, ರಬ್ಬರ್ ಪದಾರ್ಥಗಳು, ಪಾದರಕ್ಷೆ, ಪೌಲೆ ಮುಂದಿನ ಬಡ್ಜೆಟ್‌ನಲ್ಲಿ ಹೆಚ್ಚು ತೆರಿಗೆ ಬೀಳುವ ಸಂಭವವಿದೆ.

ಎಚ್ಚರಿಕೆ

ತ್ರಾ|| 15 ರಿಂದ 17 ರವರೆಗೆ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಜಾತ್ರೆಗೆ ಹೋಗುವವರು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂದು ಎಚ್ಚರಿಸಲಾಗಿದೆ.

ಪೈಸಾದಂತೆ ಹೇರಳವಾಗಿ ಮಾರಲ್ಪಾದವು.

ಅಣ್ಣಾರ ಸ್ಟ್ಯಾಚೂ ಮೇಲೆ ಮತ್ತು ಸುತ್ತಮುತ್ತ ರಾಶಿಗಟ್ಟಲೆ ಹೂವಿನ ಹಾರ ಬಿದ್ದಿದ್ದವು.

ಅಣ್ಣಾ ದೊರೈ ರಾಜಕೀಯ ಗುರು 90 ವರ್ಷದ ಇ ವಿ ರಾಮಸ್ವಾಮಿನಾಯಕರು ಅಂತ್ಯಯಾತ್ರೆಯ ಮೊದಲಿನಿಂದ ಕಡೆಯವರೆಗೂ ಇದ್ದರು — ಕಾಮರಾಜರು ಕ್ಯಾನ್ಸರ್ ಇನ್‌ಸ್ಟಿಟ್ಯೂಟಿನಲ್ಲಿ ರಾಜಾಜಿ ಹಾಲಿನಲ್ಲೂ ಇದ್ದರು ; ಶವಸಂಸ್ಕಾರ ಸಂಬಂಧದಲ್ಲಿ ಭಾಗವಹಿಸಲಿಲ್ಲ; ನೂಕುನುಗ್ಗಲು ತುಳಿತದಲ್ಲಿ ಅವರ ಕಾಲಿಗೆ ಗಾಯವಾಗಿ ಬ್ಯಾಂಡೇಜು ಕಟ್ಟಲಾಗಿತ್ತು — ರಾಜ್ಯದಲ್ಲಿ ಡಿ ಎಂ ಕೆ ವಿಜಯಕ್ಕೆ ಕಾರಣರಾದ ರಾಜಾಜಿಯವರು ಯಾತಕ್ಕೂ ಬರಲಿಲ್ಲ : ಈ ದಿನ ನಾನು ಮನೆಯಿಂದ ಹೊರಕ್ಕೇ ಬರಲಾರೆನೆಂದರು — ಮಾಜಿ ರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ನರು ತಮ್ಮ ನಿವಾಸದ ಮಹಡಿ ಮೇಲೆ ನಿಂತು ಅಂತ್ಯಯಾತ್ರೆಯನ್ನು ಪೂರ್ತಿ ಈಕ್ಷಿಸಿದರು

■

ವಿವೇಕಾನಂದರ ನುಡಿ

ಇಂಗ್ಲೀಷು ವಿದ್ಯಾಭ್ಯಾಸವು ನಮಗೆ ಕೆಲವು ಒಳ್ಳೆಯ ಗುಣಗಳನ್ನು ತಂದಿದ್ದರೂ ನಮ್ಮ ದೇಶಕ್ಕೆ ಆತಿ ಹೆಚ್ಚು ಕೆಡಕನ್ನುಂಟು ಮಾಡಿದೆ : ನಮ್ಮನ್ನು ನಾಸ್ತಿಕರನ್ನಾಗಿ ಮಾಡಿದೆ, ನಮ್ಮ ಧರ್ಮ ಪದ್ಧತಿ ಬಗ್ಗೆ ದ್ವೇಷ ಉಂಟುಮಾಡಿದೆ, ನಮ್ಮ ಶಾಸ್ತ್ರಗಳ ಬಗ್ಗೆ ಅಪನಂಬಿಕೆ ಉಂಟುಮಾಡಿದೆ, ನಮ್ಮ ಪುರಾತನ ನಾಗರೀಕತೆ ಬಗ್ಗೆ ನಿಕೃಷ್ಟತೆ ಉಂಟುಮಾಡಿದೆ, ಎಂದು ಸ್ವಾಮಿ ವಿವೇಕಾನಂದರು ಹೇಳಿರುವರು.

ನದಿಗಳಲ್ಲಿ ನೀರು ಮಂಜುಗಡ್ಡೆಯಾಯ್ತು

ಹಂಗೇರಿಯಲ್ಲಿ ಹೊಸವರ್ಷದ ಪ್ರಾರಂಭದಲ್ಲಿ ಅಲ್ಲಿಯ 15 ನದಿಗಳ ಮೇಲೆ ಅತಿ ಚಳಿಯಿಂದ 5 ರಿಂದ 15 ಸೆಂಟಿಮಾಟರ ದಪ್ಪ ಮಂಜುಗಡ್ಡೆ ಶೇಖರಣೆಯಾಯಿತು.

"ಪ್ರಜಾಪತಿ"

ಕಲ್ಕತ್ತಾ — ಅಶ್ಲೀಲ ವಿಷಯಗಳನ್ನೊಳಗೊಂಡ "ಪ್ರಜಾಪತಿ" ಕಾದಂಬರಿಯ ಗ್ರಂಥಕರ್ತನಿಗೆ ಚೀಫ್ ಪ್ರೆಸಿಡೆನ್ಸಿ ಮಾಜಿಸ್ಟ್ರೇಟರು ಶಿಕ್ಷೆ ವಿಧಿಸಿದರು.

City Municipal Council, MYSORE.

No C 8. P R.
274 C. 87,68–69.

City Municipal Offices,
Mysore, dated 25–1–1969.

NOTIFICATION

It is hereby Notified for the information of all intending candidates namely Registered Medical Practitioners in Modern Medicine Viz, persons holding Qualification granted by an authority specified or Notified under Section 3 of the Indian Medical Degrees Act, 1916 (VII of 1916) or under the Schedules or under the Indian Medical Council 1933 (Schedule XXVI of 1933) The following conditions are attached to the service

1 The duties are part-time only;

2 4 Men Doctors and 4 Women Doctors are required i e, one each Category to each of the 4 Urban Family Planning Centre;

3 Each Doctor has to work for 3 days in a week at 2 hours a day on the days fixed by the Municipal Commissioner, City Municipal Council Mysore;

4 The Male Doctor has to perform atl east 10 Vasectomy operations in each month and the Female Doctor has to perform IUCD Loop placings as per standards fixed from time to time.

5 The part-time allowance of Rs 100/- per month will be paid as Honorarium for each Doctor.

6 The tenure of service is one year in the first instance The Doctors appointed will have to abide by the terms and conditions of Service and various standing orders and Departmental circulars as issued from time to time

7 Age limit : Relaxable upto 60 years Candidates who have experience in Social work and who have already done Family Planning work will be prefered.

Intending candidates should apply to the Municipal Commissioner, City Municipal Council, Mysore enclosing all testimonials and true copies of age and qualification certificates by 15-2–1969. The other particulars may be had from Ml. offices during working hours

P. P Prabhu,
Municipal Commissicner,
C. M. C., MYSORE

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆ ಮ್ಮ ನಾ ಮ್ಮ

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ : ಕಲ್ಯಾಣ್‌ಜೀ ಆನಂದ್‌ಜೀ
[ದಿನ 3 ಪ್ರದರ್ಶನಗಳು]

ಒಪೆರಾ— ಜನಪ್ರಿಯ 2 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒ ಳ ವಿ ಳ ಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Protect the Cow

Edited, Printed & Published by Dharmaprachare Nirat
M S Krishna Rao (Proprietor) at the Satyavad Press
Chamarajapuram, Mysoe 4

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಜೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರಗೆ ಹಚ್ಚಬಹುದು

ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
– ದೀರ್ಘಕಾಲ ಬಾಳಿಕೆ ಬರುತ್ತವೆ
ಇದರಲ್ಲಿ ಹಣ ತೊಡಗಿಸುವುದು ಒಂದು ಸುದೈವ.

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು